OS No.4/2019
PW.1 (ಕೆ. ಮಹದೇವಸ್ವಾಮಿ)

ದಿನಾಂಕಃ **05-10-2021**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ.ಎಸ್.ಎಸ್. ವಕೀಲರಿಂದಃ-

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ವಕೀಲರ ಮೂಲಕ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ನಿ.ಪಿ.1 ಎಂದು, ಅಂಚೆ ರಶೀತಿಯನ್ನು ನಿ.ಪಿ.2 ಎಂದು, ಅಂಚೆ ಸ್ವೀಕೃತಿಯನ್ನು ನಿ.ಪಿ.3 ಎಂದು, ಇನ್ನೊಂದು ನೋಟೀಸು ನಿ.ಪಿ.4 ಎಂದು, ಅಂಚೆ ರಶೀತಿಯನ್ನು ನಿ.ಪಿ.5 ಎಂದು ಮತ್ತು ಅಂಚೆ ಸ್ವೀಕೃತಿಯನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಪ್ರತಿವಾದಿಯವರು ನೀಡಿರುವ ಪ್ರತ್ಯುತ್ತರ ನೋಟೀಸನ್ನು ನಿ.ಪಿ.7 ಎಂದು ಗುರುತಿಸಲಾಯಿತು.

ನಾನು ಹಾಜರುಪಡಿಸಿರುವ ಒ.ಎಸ್.2/2009 ರಲ್ಲಿಯ ವಾದಪತ್ರ, ಪ್ರತಿವಾದ ಪತ್ರ, ವಿವಾದಾಂಶಗಳು, ಸಾಕ್ಷ್ಯ ವಿಚಾರಣೆ, ನ್ಯಾಯಾಲಯದ ಆದೇಶ ಹಾಗೂ ಡಿಕ್ರಿಗಳ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ.8 ರಿಂದ 14 ರವರೆಗೆ ಗುರುತಿಸಲಾಯಿತು. ವಿಜಯ ಬ್ಯಾಂಕಿನವರು ನೀಡಿರುವ ನೋಟೀಸನ್ನು ನಿ.ಪಿ.15 ಎಂದು, ಕುಟುಂಬದ ಜೀವಂತ ಸದಸ್ಯರ ದೃಢೀಕೃತ ನಕಲನ್ನು ನಿ.ಪಿ.16 ಎಂದು, ಪಿ.ಅ್ಯಂಡ್ ಎಸ್.ಸಿ.1/2019 ರಲ್ಲಿಯ ಅರ್ಜಿಯ ದೃಢೀಕೃತ ನಕಲನ್ನು ನಿ.ಪಿ.17 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ತಿ. ನರಸೀಪುರ.